ಬಳ್ಳಾರಿಯಂಥ ಬರದ ಜಿಲ್ಲೆಗಳಲ್ಲಿ ನೀರಿನ ಒರತೆಗಳೆಂದರೆ ಜನರಿಗೆ ಬಹು ವಿಶೇಷ ಕಾಳಜಿ. ಈಗೀಗ ನಳಗಳು ಬಂದು ನೀರು ಮನೆಯೊಳಗೇ ಬಂದು ಬಿದ್ದರೂ ಒರತೆಗಳ ಪ್ರಾಮುಖ್ಯತೆ ಕೊಂಚವೂ ಕಡಿಮೆಯಾಗಿಲ್ಲ ಎಂದೇ ಹೇಳಬಹುದು. ಬಳ್ಳಾರಿ ಜಿಲ್ಲೆಯ ನಮ್ಮೂರಾದ ಹೂವಿನ ಹಡಗಲಿಯ ತಾಲ್ಲೂಕಿನ ಹೊಳಗುಂದಿ ಒಂದು ಪುಟ್ಟ ಗ್ರಾಮ. ಗ್ರಾಮವೇನೋ ಪುಟ್ಟದೇ. ಆದರೆ ರಾಜಕೀಯ, ಕೋಮುಗಲಭೆಗಳಲ್ಲಿ ಯಾವ ಪಟ್ಟಣಕ್ಕೂ ಕಡಿಮೆಯಿಲ್ಲ. ನಮ್ಮ ಈ ಪುಟ್ಟ ಹಳ್ಳಿಯಲ್ಲೂ ನಮ್ಮ ತಾತನ ಕಾಲದಿಂದಲೂ ಅಂದರೆ ಬಹುಶಃ ಏಳು ಎಂಟು ದಶಕಗಳಿಗಿಂತ ಹೆಚ್ಚು ಇತಿಹಾಸವಿರುವ ಒಂದು ಸಿಹಿ ನೀರಿನ ಒರತೆಯಿದೆ. ಊರಿನಿಂದ ಸುಮಾರು ಒಂದು ಒಂದೂವರೆ ಕಿಲೋಮೀಟರು ಹಾದಿ ಬಸವಣ್ಣನ ಗುಡಿ, ಕೆಳಗಿನ ಬಂಡೆ, ಮೇಲು ಬಂಡೆ ಮತ್ತು ಹೊಲೆಯರ ಬಂಡೆ ದಾಟಿ ಒಂದೆರಡು ಹೆಜ್ಜೆ ಹಾಕಿದರೆ ಆ ಸಿಹಿನೀರಿನ ಒರತೆ ಸಿಗುತ್ತದೆ. ಒಂದಾಳಿನಷ್ಟು ಆಳದ ಒರತೆಯ ನಾಲ್ಕೂ ಆಯಗಳನ್ನು ಕಲ್ಲಿನಿಂದ ಜೋಡಿಸಲ್ಪಟ್ಟಿವೆ. ಆ ಕಲ್ಲು ಪೊಟರೆಗಳಿಂದ ಮತ್ತು ತಳದ ಮೂಲೆಗಳಿಂದ ಐದಾರು ಸೆಲೆಗಳು ಸೇರಿ ಒರತೆಯನ್ನು ಸೃಷ್ಟಿಸಿವೆ. ಆ ಸೆಲೆಗಳಲ್ಲಿ ತಳದ ಒಂದು ಸೆಲೆ, ದೊಡ್ಡ ಸೆಲೆ, ಉಳಿದವುಗಳೆಲ್ಲ ಸಣ್ಣ ಸಣ್ಣ ಸೆಲೆಗಳು.

ನಮ್ಮೂರಿನ ಪ್ರತಿ ಮನೆಯಲ್ಲೂ ಬೆಳಗ್ಗೆ ಸಾರಿಗೆ ಬೇಳೆ ಕುದಿಯಬೇಕೆಂದರೆ ಒರತೆಯ ನೀರು ಬೇಕೇ ಬೇಕು. ಬೇಸಿಗೆ ಕಾಲದಲ್ಲಂತೂ ದೇಹದ ತೇವಾಂಶವನ್ನು ಮನಸಾ ಹೀರುವ ಬಳ್ಳಾರಿ ಬಿಸಿಲಿಗೆ ಒರತೆ ನೀರು ಅಮೃತವಿದ್ದಂತೆ. ಒಂದೆರಡು ಗುಟುಕು ಗಂಟಲೊಳಗೆ ಇಳಿದರೆ ಸಾಕು, ಹೊಟ್ಟೆ ತಣ್ಣಗಾಗಿ ಆಯಾಸವೆಲ್ಲ ಕರಗಿ ಉತ್ಸಾಹ ಮೂಡುತ್ತಿತ್ತು. ಇದುವರೆಗೆ ಎಷ್ಟು ತಲೆಮಾರಿನ ಜನರ ಹೊಟ್ಟೆ ತಣ್ಣಗಾಗಿಸಿದೆಯೋ? ತಿಳಿ ಹಳದಿ ಬಣ್ಣದ ಆ ಒರತೆ ನೀರಿಗೆ ಒಂದು ವಿಶಿಷ್ಟ ಸ್ವಾದವಿತ್ತು. ಅತ್ತ ಸಿಹಿಯೂ ಅಲ್ಲದ, ಇತ್ತ ಒಗರೂ ಅಲ್ಲದ ಮೃದು ಸ್ವಾದ. ಯಾವ ಮಜ್ಜಿಗೆ ಮತ್ತು ತಂಪು ಪಾನೀಯಗಳೂ ನಮ್ಮೂರಿನ ಒರತೆ ನೀರಿಗೆ ಸರಿ ಸಾಟಿಯಲ್ಲ. ನನಗೂ ಈ ಒರತೆ ನೀರಿಗೂ ಇದ್ದ ಋಣ ಯಾವಾಗಲೋ ತೀರಿಹೋಗಿತ್ತು. ಒಂಬತ್ತು ವರ್ಷಗಳ ಹಿಂದೆ ಊರು ಬಿಟ್ಟು ಬೆಂಗಳೂರು ಪಾಲಾಗಿ, ಸ್ವಾದವಿಲ್ಲದ ಫಿಲ್ಟರ್ ನೀರು ಕುಡಿದು, ಚರಂಡಿಯಲ್ಲಿ ಬೆಳೆದ ತರಕಾರಿ ತಿನ್ನುತ್ತಾ ಇನ್ನೂ

